ಇದೊಂದು ಲಾಜಿಕ್ ಅನಿಸಿದ್ರೂ, ಇದಕ್ಕಿಂತ ಹೆಚ್ಚಿಗೆ ಅಟ್ಯಾಚ್‌ಮೆಂಟ್ ಬಯಸಿದ್ರೆ ಶೈಲಜಾ ತುಂಬಾನೇ ಡಿಸ್ಟರ್ಬ್ ಆಗ್ತಾಳೆ."

ಈಗ ಏನು ಮಾಡೋದು? ಯೋಚನೆಗಳ ಮಧ್ಯದಲ್ಲಿಯೇ ಬೆಳಕು ಹರಿಯಿತು. ಬೆಳಗ್ಗೆ "ಏನಮ್ಮಾ, ಸ್ರವಂತಿ ರಾತ್ರಿಯೆಲ್ಲಾ ತುಂಬಾ ಯೋಚಿಸ್ತಾ ಇರೋ ಥರ ಇತ್ತು?" ಎಂದು ಅಪ್ಪ ಕೇಳಿದಾಗ "ಏನೂ ಇಲ್ಲ ಅಪ್ಪ" ಅಂದಳು.

"ಇವತ್ತು ರಜೆ ಹಾಕಿ ರೆಸ್ಟ್ ತಗೋಬಾರ್ದಾ?"

"ಬೇಡಪ್ಪಾ, ಆಫೀಸಿನಲ್ಲಿ ಕೆಲಸ ಪೆಂಡಿಂಗ್ ಇದೆ."

ರಾತ್ರಿಯೆಲ್ಲಾ ನಿದ್ದೆ ಇಲ್ಲದೇ ಕಣ್ಣೆಲ್ಲಾ ಕೆಂಪಾಗಿ ಉಬ್ಬಿಕೊಂಡಿತ್ತು. ಸುತ್ತಲು ಕಣ್ಣಾಡಿಸಿದಳು. ಸಂಜೀವ್ ಸೀಟ್‌ನಲ್ಲಿ ಕಾಣಲಿಲ್ಲ. ಮಧ್ಯಾಹ್ನ ಕಳೆದರೂ ಸಂಜೀವ್ ಬರಲಿಲ್ಲ. ಜವಾನ ಅನ್ವರ್‌ನನ್ನು ಕೇಳಿದಳು. "ಸಂಜೀವ್ ಸರ್ ಬಂದಿಲ್ವಾ?" ಅಂತ. ಆತ ವಿಚಿತ್ರ ನೋಟದೊಂದಿಗೆ "ನಿಮಗೆ ಗೊತ್ತಿಲ್ಲದ ವಿಷಯ ಏನಿದೆಯಮ್ಮಾ?" ಎಂದ.

ಇಬ್ಬರ ಸಲುಗೆ ಇಡೀ ಆಫೀಸ್‌ಗೆ ಗೊತ್ತಿತ್ತು.

"ನಾನು ಕೇಳಿಲ್ಲ ಅನ್ವರ್" ಎಂದಳು.

"ಸಾರ್, ಈ ದಿನ ರಜೆ ಹಾಕಿದ್ದಾರಮ್ಮ."

ತಕ್ಷಣ ಶೈಲಜಾಗೆ ಫೋನ್ ಮಾಡಿದಳು. "ಸಂಜೀವ್‌ಗೆ ಹುಷಾರಿಲ್ಲವಾ?"

"ಹಾಗೇನಿಲ್ಲ" ಎಂದಳು ಶೈಲಜಾ.

"ಇವತ್ತು ಆಫೀಸ್‌ಗೆ ಬಂದಿಲ್ಲ."

"ಓ ಅದಾ, ಇವತ್ತೇನೋ ಒಂದು ಮುಖ್ಯವಾದ ಕೆಲಸ ಇದೆ ಅಂತ ಹೇಳಿ ಹೋದ್ರು. ಒಂದು ಸಲ ಕಾಲ್ ಮಾಡಿ ನೋಡ್ಬೇಕಿತ್ತು."

"ಸರಿ, ಫೋನ್ ಮಾಡ್ತೀನಿ" ಎಂದಳು.

★★★

ಕಾಫಿ ಡೇನಲ್ಲಿ ಸ್ರವಂತಿ ಅಪ್ಪ ಕೃಷ್ಣಮೂರ್ತಿಯವರ ಜೊತೆ ಸಂಜೀವ್ ಮಾತನಾಡುತ್ತಿದ್ದ. ಸಂಜೀವ್ ಹೇಳಿದ್ದು ಕೇಳಿ ಸ್ವಲ್ಪ ಶಾಕ್ ಆಯಿತು ಅವರಿಗೆ.

"ನಿಜ ಸಂಜೀವ್. ರಾಮ್ ಜೊತೆ ಡೈವೋರ್ಸ್ ಆಗಿ ಐದು ವರ್ಷ ಕಳೀತು. ಆಗಲೇ ಅವಳಿಗೆ ಮದುವೆ ಮಾಡಬೇಕಿತ್ತು. ತಡ ಮಾಡಿದ್ದು ತಪ್ಪಾಯ್ತು. ನಮ್ಮದೇನಿದೆ ಮುಳುಗುವ ಸೂರ್ಯನ ತರಹ. ಅವಳಿಗೆ ಇನ್ನು ಬದುಕಿ ಬಾಳುವ ವಯಸ್ಸು. ಒಂದು ಒಳ್ಳೇ ಹೊಂದುವಂತಹ ಸಂಬಂಧ ನೋಡು. ನಾನು ಪ್ರಯತ್ನ ಮಾಡ್ತೀನಿ" ಎಂದರು.

"ಖಂಡಿತಾ ನೋಡ್ತೀನಿ ಸರ್. ಅವಳನ್ನ ಒಪ್ಪಿಸೋ ಜವಾಬ್ದಾರಿ ನಿಮ್ಮದೇ" ಎಂದು ಎದ್ದ.

ಕೃಷ್ಣಮೂರ್ತಿ ಹತ್ತಿರ ಸ್ರವಂತಿಯ ಜಾತಕ ಮತ್ತಷ್ಟು ವಿವರಗಳನ್ನು ಪಡೆದುಕೊಂಡು ತನ್ನ ಬಳಿ ಇದ್ದ ಸ್ರವಂತಿಯ ಫೋಟೊಗಳನ್ನು ಡೌನ್‌ಲೋಡ್ ಮಾಡಿಕೊಂಡು ಮ್ಯಾರೇಜ್ ಬ್ಯೂರೊವನ್ನು ಸಂಪರ್ಕಿಸಿದ ಸಂಜೀವ್.

ಸ್ರವಂತಿ ಚೆಂದನೆ ಹುಡುಗಿ. ಆಕರ್ಷಕ ಸಂಬಳ. ಖಂಡಿತಾ ಒಂದು ಒಳ್ಳೆಯ ಸಂಬಂಧವನ್ನು ಹೊಂದಿಸಲೇಬೇಕು ಅಂದುಕೊಂಡ.

ಮಧ್ಯಾಹ್ನ ಮೂರರ ಸುಮಾರಿಗೆ ಸ್ರವಂತಿಯ ಫೋನ್ ಬಂತು. "ನಿನ್ನ ಕೆಲಸದ ಮೇಲೆ ಇದೀನಮ್ಮಾ" ಎಂದ ಸಂಜೀವ್.